**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 51/2017**

ದಿನಾಂಕಃ 07.01.2019
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 30 ಪ್ರಾಸಾ - 22

| | | |
|---|---|---|
| ಹೆಸರು | ಃ | ಹೆಚ್.ಕೆ.ಕುಮಾರ |
| ತಂದೆಯ/ಗಂಡನ ಹೆಸರು | ಃ | ಲೇಟ್ ಪಿಓನ್ ಕೆಂಪಯ್ಯ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ಮುಖ್ಯಪೇದೆ ಸಂಖ್ಯೆ 42<br>ಬಿಡದಿ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಚನ್ನಪಟ್ಟಣ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಕಳೆದ 3 ವರ್ಷದಿಂದ ನಾನು ಬಿಡದಿ ಠಾಣೆಯಲ್ಲಿ ಅಪರಾಧ ಪತ್ತೆ ವಿಭಾಗದಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ಮಾಡಿಕೊಂಡಿದ್ದೇನೆ.

2. ದಿನಾಂಕ 31.01.2017 ರಂದು ನನಗೆ ಪೇದೆ ಸಂಖ್ಯೆ 415 ರಾಜು ಮತ್ತು ಪಿಸಿ-366 ಬಸವಲಿಂಗಶೀಲವಂತರ್ ರವರಿಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿಗಳನ್ನು ಪತ್ತೆ ಹಚ್ಚಿ ಹಾಜರುಪಡಿಸಲು ಪಿಎಸ್ಐ-ವಿ.ಕುಮಾರ್ ರವರು ಸೂಚನೆಯನ್ನು ಕೊಟ್ಟಿದ್ದರು.

3. ಅದರಂತೆ ಅದೇ ದಿನ ನಾವುಗಳು ಬಾತ್ಮಿದಾರರನ್ನು ಸಂಪರ್ಕಿಸಿ ರಾಮನಗರ ಟೌನ್ ಜಾಲಮಂಗಲ ರಸ್ತೆ, ಮಂಜುನಾಥ ನಗರದ ಬಳಿ ಮಧ್ಯಾಹ್ನ 12 ಗಂಟೆಗೆ 3 ಜನ ಆಸಾಮಿಗಳನ್ನು ವಶಕ್ಕೆ

ಪಡೆದುಕೊಂಡಿದ್ದೇವೆ. ಅವರುಗಳನ್ನು ವಿಚಾರಿಸಲಾಗಿ ಅವರುಗಳ ಹೆಸರು ಮುಜೀಬ್ ಅಲಿಯಾಸ್ ಮುಜು, ರಾಜು ಉಃ ರಾಜಣ್ಣ ಉಃ ಲಾರಿ ರಾಜು ಮತ್ತು ಮಲ್ಲೇಶ್ ಎಂದು ಗೊತ್ತಾಯಿತು.

4. ಸದರಿ 3 ಜನ ಆರೋಪಿಗಳು ಈ ಪ್ರಕರಣದ ಆರೋಪಿತರೆಂದು ಖಚಿತ ಪಡಿಸಿಕೊಂಡು ಮಧ್ಯಾಹ್ನ 12.30 ಗಂಟೆಗೆ ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದ್ದೇವೆ.

5. ನಾವು ವಶಕ್ಕೆ ಪಡೆದುಕೊಂಡ ಆರೋಪಿಗಳಾದ ಮುಜೀಬ್ ಅಲಿಯಾಸ್ ಮುಜು, ರಾಜು ಉಃ ರಾಜಣ್ಣ ಉಃ ಲಾರಿ ರಾಜು ಮತ್ತು ಮಲ್ಲೇಶ್ ಈಗ ನ್ಯಾಯಾಲಯದ ಮುಂದೆ ಇದ್ದಾರೆ (ಸಾಕ್ಷಿಯು ನ್ಯಾಯಾಲಯದ ಮುಂದಿರುವ 5 ರಿಂದ 7ನೇ ಆರೋಪಿಗಳನ್ನು ಗುರುತಿಸಿ ಉತ್ತರಿಸಿದ್ದಾರೆ).

**<u>ಪಾಟೀ ಸವಾಲುಃ</u> ಶ್ರೀ.ಎಸ್.ಎಂ. ವಕೀಲರಿಂದ ಃ 5 ರಿಂದ 7ನೇ ಆರೋಪಿಗಳ ಪರವಾಗಿಃ-**

6. ಆರೋಪಿಗಳನ್ನು ದಸ್ತಗಿರಿ ಮಾಡಿದ್ದೇವೆ ಎನ್ನಲಾದ ಜಾಗಕ್ಕೆ ನಮ್ಮ ಠಾಣೆಯಿಂದ ಅಂದಾಜು ಒಂದೂವರೆ ಕಿ.ಮೀ. ದೂರ. ಆರೋಪಿ-5 ರಿಂದ 7 ರವರನ್ನು ದಸ್ತಗಿರಿ ಮಾಡಿದ ಜಾಗದಲ್ಲಿ ಪಂಚನಾಮೆಯನ್ನು ಬರೆದಿಲ್ಲ. ದಸ್ತಗಿರಿ ಮಾಡಿಕೊಂಡು ಬರಲು ನಮಗೆ ಪಾಸ್‌ಪೋರ್ಟ್ ಕೊಟ್ಟಿಲ್ಲ.

7. 3 ಜನ ಆರೋಪಿಗಳನ್ನು ವಶಕ್ಕೆ ಪಡೆದಾಗ ನಾವು ದಸ್ತಗಿರಿ ನೋಟೀಸ್ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನಾವು ದಸ್ತಗಿರಿ ನೋಟೀಸ್ ಕೊಡದೆ ಬಂಧನದ ಕುರಿತು ಮಹಜರ್ ಮಾಡದೇ ಮೇಲಾಧಿಕಾರಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.